ಪ್ರಜಾವಾಣಿ
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

**Saturday 25th September 2021, Page No.02**

## UPSC Result Announced: RVCE Yathish, Raghavendra Topers

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2020ನೇ ಸಾಲಿನ ಕೇಂದ್ರ ನಾಗರಿಕ ಸೇವಾ (ಐಎಎಸ್) ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, 77ನೇ ರ್‍ಯಾಂಕ್ ಪಡೆದಿರುವ ಬೆಂಗಳೂರಿನ ಕೆ.ಜಿ. ಅಕ್ಷಯ್ ಸಿಂಹ ರಾಜ್ಯಕ್ಕೆ ಮೊದಲಿಗರಾಗಿದ್ದಾರೆ.

ಯತೀಶ್-115, ಪ್ರಿಯಾಂಕ ಕೆ.ಎಂ.-121, ನಿಶ್ಚಯ್ ಪ್ರಸಾದ್ -130, ಸಿರಿವೆನ್ನೆಲ-204, ಅನಿರುದ್ಧ ಜಿ ಗಂಗಾವರಂ - 252, ಡಿ. ಸೂರಜ್ - 255, ನೇತ್ರಾ ಮೇಟಿ - 326, ಮೇಘ ಜೈನ್-354, ಪ್ರಜ್ವಲ್-376, ಸಾಗರ್ ಎ ವಾಡಿ-385, ಅರ್ಜುನ್ ಜಿ.ಎಸ್.-452, ನಾಗರಗೋಜೆ ಶುಭಂ ಬಾಬುಸಾಹೇಬ್-453, ಬಿಂದುಮಣಿ-468, ಮಾಲಾಶ್ರೀ-504, ರಾಘವೇಂದ್ರ ಎನ್-555, ಶಾಕೀರಅಹ್ಮದ್- 583, ಪ್ರಮೋದ್ ಆರಾಧ್ಯ ಎಚ್.ಆರ್.-601, ಧರ್ಮವೀರ್-657, ಕೆ.ಸೌರಭ್-725, ಸಂದೀಪ್ ಪಿ.ಎಸ್-741, ವೈಶಾಖ್ ಭಾಗಿ-744, ಸಂತೋಷ್ ಎಚ್-751, ಅಮೃತ್ಎ ಚ್.ವಿ-752ನೇ ರ್‍ಯಾಂಕ್ ಪಡೆದಿದ್ದಾರೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಅಕ್ಷಯ್ ಸಿಂಹ, 'ಮುಖ್ಯ ಪರೀಕ್ಷೆ ಚೆನ್ನಾಗಿ ಬರೆದಿದ್ದೆ. ಸಂದರ್ಶನವೂ ಚೆನ್ನಾಗಿಯೇ ಆಗಿತ್ತು. ಆದರೆ 77ನೇ ರ್‍ಯಾಂಕ್ ಗಳಿಸಬಹುದೆಂಬ ನಿರೀಕ್ಷೆ ಇರಲಿಲ್ಲ' ಎಂದರು.

'ಭಾರತೀಯ ವಿದೇಶಾಂಗ ಸೇವೆಗೆ (ಐಎಫ್ಎಸ್) ಸೇರುವ ಗುರಿ ಇದೆ. ಅದಕ್ಕೆ ಮೊದಲ ಆದ್ಯತೆ ನೀಡಿದ್ದೇನೆ. ಎಲ್ಲರೂ ಐಎಎಸ್‌ಗೆ ಪ್ರಾಧಾನ್ಯತೆ ನೀಡುವುದರಿಂದ ನನಗೆ ಐಎಫ್ಎಸ್ ಸಿಗಬಹುದೆಂಬ ನಿರೀಕ್ಷೆ ಇದೆ. ವಿದೇಶಗಳಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳು, ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸುವುದು ಹೆಮ್ಮೆಯ ವಿಷಯ. ಹೀಗಾಗಿ ಐಎಫ್ಎಸ್‌ನತ್ತ ಒಲವು ಹೊಂದಿದ್ದೇನೆ' ಎಂದರು.


ಕೆ.ಜಿ. ಅಕ್ಷಯ್ ಸಿಂಹ


ಕೆ. ಸೌರಭ್


ಪ್ರಮೋದ್ ಆರಾಧ್ಯ


ಧರ್ಮವೀರ್

'2018ರಿಂದಲೇ ಸಿದ್ಧತೆ ಆರಂಭಿಸಿದ್ದೆ. ಈ ಸಾಧನೆಯ ಶ್ರೇಯ ದೊಡ್ಡಪ್ಪ ಸತ್ಯನಾರಾಯಣ ಅವರಿಗೆ ಸಲ್ಲಬೇಕು. ಆದಾಯ ತೆರಿಗೆ ಇಲಾಖೆಯಲ್ಲಿ ಪ್ರಧಾನ ಮುಖ್ಯ ಆಯುಕ್ತರಾಗಿ ಕೆಲಸ ಮಾಡಿ ನಿವೃತ್ತರಾಗಿರುವ ಅವರು ಪ್ರತಿ ಹಂತದಲ್ಲೂ ಸಲಹೆ, ಮಾರ್ಗದರ್ಶನ ನೀಡಿದ್ದರು. ಇನ್‌ಸೈಟ್ ಅಕಾಡೆಮಿಯ ವಿನಯ್‌ಕುಮಾರ್, ವೆಂಕಟೇಶಪ್ಪ ಅವರ ಸಹಕಾರವನ್ನೂ ಮರೆಯುವಂತಿಲ್ಲ' ಎಂದು ಹೇಳಿದರು.

'ಕೋವಿಡ್, ಭಯೋತ್ಪಾದಕತೆ ಹೀಗೆ ನಾನಾ ಸಮಸ್ಯೆಗಳು ಈಗ ಕಾಡುತ್ತಿವೆ. ಇವುಗಳ ವಿರುದ್ಧ ಎಲ್ಲಾ ದೇಶಗಳೂ ಒಗ್ಗಟ್ಟಾಗಿ ಹೋರಾಡಬೇಕು. ಮುಂದೆ ಏನು ಮಾಡಬಹುದು ಎಂಬುದರ ಬಗ್ಗೆ ಹೆಚ್ಚು ಆಲೋಚಿಸಿಲ್ಲ. ಬೇರೆ ಬೇರೆ ದೇಶಗಳಿಗೆ ಭೇಟಿ ನೀಡಿ ಅವರಿಂದ ಹೊಸ ವಿಚಾರಗಳನ್ನು ಕಲಿಯಬೇಕಿದೆ' ಎಂದರು. ಅಕ್ಷಯ್ ಸಿಂಹ ಅವರು ಜಯಸಿಂಹ ಹಾಗೂ ಉಷಾ ದಂಪತಿಯ ಮಗ. ನಗರದ ಸಜ್ಜನ ರಾವ್ ವೃತ್ತದ ಬಳಿಯ ವಾಸವಿದ್ದಾರೆ.